# ಅತೀಂದ್ರಿಯದ ಅಮಲಿನಲ್ಲಿ

■ ಪ್ರಭಾಕರ ಶಿಶಿಲ
ಕಲೆ: ನಾಮದೇವ ಕಾಗದಗಾರ

ಮೈಸೂರು ವಿಶ್ವವಿದ್ಯಾಲಯದಲ್ಲಿ 1976ರಲ್ಲಿ ಅರ್ಥಶಾಸ್ತ್ರ ಎಂ.ಎ. ಪದವಿ ಪಡೆದು ಮಾನಸಗಂಗೋತ್ರಿಯಿಂದ ಹೊರಬರುವಾಗ ನನ್ನ ತಲೆಯಲ್ಲಿದ್ದದ್ದು – ನನ್ನ ಬುದ್ಧಿಮತ್ತೆಯ ಮಟ್ಟಕ್ಕೆ ಅಮೆರಿಕ ಅಥವಾ ಯೂರೋಪೇ ಸರಿ ಎಂಬ ಭಾವನೆ.

ನನ್ನ ಸಹಪಾಠಿಗಳೆಲ್ಲರೂ ಯೋಚಿಸುತ್ತಿದ್ದುದೇ ಹಾಗೇ. ಮೈಸೂರು ಸರಸ್ವತಿಪುರಂನ ಹದಿನಾಲ್ಕನೇ ಮೆಯಿನ್‌ನ ಪುಟ್ಟ ಬಿಲ್ಡಿಂಗಿನ ಏಕೈಕ ಮಹಡಿಯಲ್ಲಿ ನಾನು, ಕಳಸದ ವಸುಪಾಲಯ್ಯ ಮತ್ತು ಸೈಕಾಲಜಿ ರಾಘವ ಹೆಗ್ಡೆ ಸೆಲ್ಫ್ ಕುಕ್ ಮಾಡಿಕೊಂಡು ಬದುಕುತ್ತಿದ್ದ ಆ ದಿನಗಳಲ್ಲಿ ನಮ್ಮ ತಲೆಯಲ್ಲಿ ಅಂತಹ ಭಾವನೆಯನ್ನು ಮೂಡಿಸಿದ್ದು ಗಂಗೋತ್ರಿಯ ಎಲೈಟ್ ವಾತಾವರಣ.

ಕಳಸದ ವಸುಪಾಲಯ್ಯ ಎಂ.ಎ. ಮುಗಿದ ಕೂಡಲೇ ಎಂ.ಬಿ.ಬಿ.ಎಸ್. ಡಾಕ್ಟರಿಣಿಯ ಮನ ಮೆಚ್ಚಿದ ಪತಿಯಾಗಿ ಚಿಕ್ಕಮಗಳೂರಲ್ಲಿ ಬದುಕು ಕಂಡುಕೊಂಡ.

ದಕ್ಷಿಣ ಕನ್ನಡದ ಪುಂಜಾಲಕಟ್ಟೆ ಬಳಿಯ ಹಳ್ಳಿಯೊಂದರಿಂದ ಬಂದಿದ್ದ ಸೈಕಾಲಜಿ ರಾಘವ ಹೆಗ್ಡೆಗೆ ಕುಗ್ರಾಮದಲ್ಲಿ ತನ್ನ ಪ್ರತಿಭೆ ಪೋಲಾಗುವುದು ಇಷ್ಟವಿರಲಿಲ್ಲ. ಅವರು ಬೆಂಗಳೂರಿಗೆ ತೆರಳಿ ಉಪ್ಪಾರಪೇಟೆ ಪೊಲೀಸು ಸ್ಟೇಷನ್, ರೈಲ್ವೇ ಸ್ಟೇಷನ್ ನಡುವಣ ರಸ್ತೆಯ ತಗ್ಗಿನ ತುಲಸಿತೋಟದ ಲಾಡ್ಜ್ ಒಂದರಲ್ಲಿ ರೂಮು ಮಾಡಿಕೊಂಡು ಬೆಂಗಳೂರಲ್ಲಿ ತಮ್ಮ ಅದೃಷ್ಟ ಅರಸತೊಡಗಿದರು. ನಾನು ಅಂಡು ಸುಟ್ಟ ಬೆಕ್ಕಿನಂತೆ ಅಂಡಲೆಯುತ್ತಿದ್ದೆ.

ಅಂತಹ ದಿನಗಳಲ್ಲಿ 'ಹಿಂದು'ವಿನಲ್ಲಿ ಆ ಜಾಹೀರಾತು ಕಾಣಿಸಿಕೊಂಡಿತು.

ಮಹರ್ಷಿ ಮಹೇಶ ಯೋಗಿಗಳ ಅತೀಂದ್ರಿಯ ಧ್ಯಾನ ತರಬೇತಿ. ತಿರುಪತಿ–ತಿರುಮಲ ಬೆಟ್ಟದಲ್ಲಿ ಮೂರು ತಿಂಗಳ ಶಿಬಿರ. ತರಬೇತಿ ಶುಲ್ಕ ಐದು ನೂರು. ಶಿಬಿರದ ಬಳಿಕ ಅಮೆರಿಕ ಅಥವಾ ಯೂರೋಪಿನಲ್ಲಿ ಪೋಸ್ಟಿಂಗು.

ನಾನು ರಾಘವ ಹೆಗ್ಡೆಗೆ ಪತ್ರ ಬರೆದು 'ಹಾಕೋಣವಾ' ಕೇಳಿದೆ. ಅವರು 'ಬೆಂಗಳೂರಿಗೆ ಬನ್ನಿ' ಎಂದರು. ಬೆಂಗಳೂರಿಗೆ ಹೋದರೆ ಸತ್ಯನಾರಾಯಣ ಹೊಳ್ಳನ ಎನ್.ಆರ್. ಕಾಲನಿ ಮನೆಯಲ್ಲಿ ಅಥವಾ ಧರ್ಮಸ್ಥಳ ಸುರೇಂದ್ರ ಹೆಗ್ಗಡೆಯವರ ಅಸಿಸ್ಟೆಂಟ್ ನಾಗೇಂದ್ರನೊಡನೆ ಔಟ್‌ಹೌಸಿನಲ್ಲಿ ಒಂದಷ್ಟು ದಿನ ಉಳಕೊಳ್ಳಬಹುದಿತ್ತು. ನಾನು ಹೊರಟೆ. ಊಟ ತಿಂಡಿ ಎಲ್ಲಾದರೂ ನಡೆಯುತ್ತದೆ. ಹೆಗ್ಡೆ ಮತ್ತು ನನ್ನನ್ನು ವಿಲ್ಸನ್ ಗಾರ್ಡನ್ನಿನ ಬಂಗಲೆಯೊಂದರಲ್ಲಿ ಇಂಟರ್ವ್ಯೂ ಮಾಡಿದವನು ಒಬ್ಬ ಭಾರತೀಯ. ಆತ ಯಾವುದೋ ಕಂಪನಿಯ ಎಂ.ಡಿ. ಇರಬೇಕೆಂದು ಊಹಿಸಿದೆ. ಅವನು ಮಾತಾಡಿದ್ದು ಅಮೆರಿಕನ್ ಸ್ಟೈಲಿನ ಇಂಗ್ಲೀಷಲ್ಲಿ.

'ಮಹರ್ಷಿ ಮಹೇಶ ಯೋಗಿಗಳು ಸ್ವಿಜರ್ಲೆಂಡಿಗೆ ಹೋಗಿ ದೊಡ್ಡ ಆಶ್ರಮ ಕಟ್ಟಿ ಯುರೋಪಿಗೇ ಯೋಗ ಕಲಿಸಿದ ಗುರು. ಅವರ ಟ್ರಾನ್ಸಿಡೆಂಟಲ್ ಮೆಡಿಟೇಶನ್ನು ಅಧ್ಯಾತ್ಮ ರಂಗದಲ್ಲೊಂದು ರೆವೆಲ್ಯೂಶನ್ನು. ಅದೀಗ ಯುರೋಪಿನಲ್ಲಿ ಮಾತ್ರವಲ್ಲದೆ, ಅಮೆರಿಕ, ಕೆನಡಾಗಳಲ್ಲೂ ಪಾಪ್ಯುಲರ್ ಆಗುತ್ತಿದೆ. ನಮಗೆ ಐವತ್ತು ಮಂದಿ ಯೋಗಾ ಟ್ರೈನೀಸ್ ಬೇಕು. ಅದಕ್ಕೇ ಈ ಇಂಟರ್‌ವ್ಯೂ. ಮೂರು ತಿಂಗಳ ಟ್ರೈನಿಂಗು ಮುಗಿದ ಕೂಡಲೇ ನಿಮಗೆ ಅಮೆರಿಕದ ಐವತ್ತು ರಾಜ್ಯಗಳಲ್ಲಿ ಪೋಸ್ಟಿಂಗು'.

ನಾನು, ಹೆಗ್ಡೆ ಮುಖ ಮುಖ ನೋಡಿಕೊಂಡೆವು. ನಮ್ಮ ಬುದ್ಧಿಮತ್ತೆಗೆ ಬೆಲೆ ಬರುವ ಕಾಲ ಕೂಡಿ ಬರುತ್ತಿದೆ.!

ಏಳುಕೊಂಡಲವಾಡ ವೆಂಕಟರಮಣನ ಭೂವೈಕುಂಠ ತಿರುಮಲ ಬೆಟ್ಟದಲ್ಲಿ ಚೌಲ್ಟ್ರಿಯೊಂದರಲ್ಲಿ ನಾವು ಐವತ್ತು ಜನ ಇಬ್ಬರಿಗೊಂದರಂತೆ ಅಲಾಟ್ ಮಾಡಿದ ರೂಮುಗಳಲ್ಲಿ ಉಳಕೊಂಡೆವು. ಅದು 1976ರ ಮಳೆಗಾಲ. ಆಗ ಭಕ್ತರ ಸಂಖ್ಯೆ ಬಹಳ ಕಡಿಮೆ. ಅತೀಂದ್ರಿಯ ಧ್ಯಾನ ತರಬೇತಿಯವರೆಂದು ಯಾವಾಗ ಬೇಕಾದರೂ ಒಂದು ಪೈಸೆ ಕೊಡದೆ ತಿಮ್ಮಪ್ಪನನ್ನು ನೋಡಲು ಅವಕಾಶವಿರುವ ವಿ.ವಿ.ಐ.ಪಿ. ಪಾಸು ಉಚಿತವಾಗಿ ನಮ್ಮ ಕೈ ಸೇರಿತು. ನಾನು ಅದರ ಸದುಪಯೋಗ ಮಾಡಿಕೊಂಡು ಕಾವಲಿನ ಪೊಲೀಸರಿಗೆ, ದೇವಳದ ಅರ್ಚಕ ಗಡಣಕ್ಕೆ ಚಿರಪರಿಚಿತನಾದೆ. ಪಾಸು ತೋರಿಸಿ ಒಳ ಹೋಗಿ ಬೇಕೆಂದಾಗ ಖಾರ–ಸಿಹಿ ಪೊಂಗಲ್ ತಿನ್ನುವುದು ನನ್ನ ಅಭ್ಯಾಸವಾಗಿ ಬಿಟ್ಟಿತು.

ಶಿಬಿರದ ಊಟ ಏನೇನೂ ಚೆನ್ನಾಗಿರಲಿಲ್ಲ. ಆಂಧ್ರದ ಖಾರದ ಅಡುಗೆ ನನಗೆ ಹಿಡಿಸುತ್ತಲೇ ಇರಲಿಲ್ಲ. ತುಂಡುಪ್ರಿಯ ಹೆಗ್ಡೆಗೆ ನನಗಿಂತಲೂ ಕಷ್ಟಕ್ಕಿಟ್ಟುಕೊಂಡಿತು. ಶಿಬಿರದ ಪಾಠಗಳೋ ಅತ್ಯಂತ ಅನಾಕರ್ಷಕವಾಗಿದ್ದವು. ಅವು ಸ್ವಿಜರ್ಲಂಡಿನಲ್ಲಿ ಎಂದೋ ಸಿದ್ಧಗೊಂಡ ವಿಡಿಯೋಗಳು. ಅವನ್ನು ಪ್ಲೇಯರಿಗೆ ಹಾಕಿ ನಾವು ಟಿ.ವಿ.ಯೆದುರು ಕೂತು ಬೆಳಿಗ್ಗೆ ಮೂರು ಗಂಟೆ, ಮಧ್ಯಾಹ್ನ ಮೇಲೆ ಮೂರು ಗಂಟೆ ಕಡ್ಡಾಯವಾಗಿ ಮಹರ್ಷಿಗಳ ವಿಡಿಯೊ ಪಾಠ ಕೇಳಬೇಕಿತ್ತು. ಅದು ಮುಗಿದ ಮೇಲೆ ಮಾರ್ಗದರ್ಶಕರಲ್ಲಿ ಸಂವಾದ. ನಮ್ಮಲ್ಲಿ ಪ್ರಶ್ನೆಗಳಿದ್ದರೆ ಅವರಲ್ಲಿ ಪರಿಹಾರ ಸಿಗುತ್ತಿತ್ತು. ಆದರೆ ಯಾರಲ್ಲೂ ಪ್ರಶ್ನೆಗಳಿರಲಿಲ್ಲ. ಅರ್ಥ ಆದರಲ್ಲವೇ ಪ್ರಶ್ನೆ ಏಳುವುದು? ಅಮೆರಿಕದಲ್ಲಿ ಕೆಲಸ ಸಿಗುತ್ತದೆಂದು ನಾವದನ್ನು ಸದ್ದಿಲ್ಲದೆ ಸಹಿಸಿಕೊಂಡೆವು.

ಆದರೆ ತಿರುಮಲ ತಿಮ್ಮಪ್ಪನ ಸನ್ನಿಧಿ ಇದೆಯಲ್ಲ, ಅಲ್ಲಿ ಬೇಸರವೆಂಬ ಭಾವಕ್ಕೆ ಜಾಗವೇ ಇಲ್ಲ. ತಿಮ್ಮಪ್ಪ ರಾತ್ರಿ ಹನ್ನೆರಡು ಗಂಟೆಗೆ ಮಲಗುತ್ತಾನೆ. ಬೆಳಿಗ್ಗೆ ಸರಿಯಾಗಿ ಎರಡು ಗಂಟೆಗೆ ಏಳುತ್ತಾನೆ. ಅವನದು ಕೇವಲ ಎರಡು ಗಂಟೆಗಳ ನಿದ್ದೆ! ಬೆಳಿಗ್ಗೆ ಎರಡು ಗಂಟೆಗೆ ಲೌಡು ಸ್ಪೀಕರು – ಏಳು ಕೊಂಡಲವಾಡ ಎದ್ದೇಳು – ಎಂದು, ನಿದ್ದೆ ಮಾಡಲು ಸಾಧ್ಯವೇ ಇಲ್ಲದಂತೆ ಅರ್ಧಗಂಟೆ ವೆಂಕಟೇಶ ಸುಪ್ರಭಾತವನ್ನು ಮೊಳಗಿಸಿದರೆ ಪಾಪ ಅವನಾದರೂ ಏನು ಮಾಡಿಯಾನು! ಅವನು, ಏಳಲಿ ಬಿಡಲಿ, ಸಾವಿರಾರು ರೂಪಾಯಿ ವೆಚ್ಚದ ಪೂಜೆಯ ರಶೀದಿಯನ್ನು ಹಿಂದಿನ ದಿವಸವೇ ಮಾಡಿಸಿದ ಶ್ರೀಮಂತ ಭಕ್ತರು ವಿ.ವಿ.ಐ.ಪಿ. ಪಾಸು ಹಿಡಕೊಂಡು, ಸೆಂಟ್ರಿಗಳಿಂದ ಸೆಲ್ಯೂಟು ಹೊಡೆಸಿಕೊಂಡು ಬೆಳಿಗ್ಗೆ ಎರಡು ಗಂಟೆಗೆ ಗರ್ಭಗುಡಿಯೆದುರು ಜಮಾಯಿಸಿಬಿಡುತ್ತಾರೆ. ವಿಶ್ವದ ಎಲ್ಲಾ ಬಗೆಯ ಅಮೂಲ್ಯ ಲೋಹ, ಹರಳು ಕಲ್ಲು, ವಜ್ರವೈಢೂರ್ಯ, ನವರತ್ನಗಳಿಂದ ಮಾಡಿದ ವಿವಿಧ, ವಿಶಿಷ್ಟ ಕುಸುರಿ ಕೆಲಸದ, ಕಲಾತ್ಮಕ ಮನಮೋಹಕ, ಅಪೂರ್ವ, ಅಲಭ್ಯ, ಅನನ್ಯ ಆಭರಣಗಳಿಂದ ವೆಂಕಟೇಶನಿಗೆ ಬೆಳಿಗ್ಗೆ ಎರಡರಿಂದ ಆರರವರೆಗೆ ಬಗೆ ಬಗೆಯ ಪೂಜೆ ಸಲ್ಲುತ್ತದೆ. ಒಂದೊಂದು ಪೂಜೆಗೆ ಒಂದೊಂದು ರಶೀದಿಯಾಗಬೇಕು. ಅವೆಲ್ಲಾ